

بسم اللهِ الرّحمٰنِ الرّحيم

# ಯಥಾರ್ಥ ಇಸ್ಲಾಂ ಧರ್ಮದ ಶಾಂತಿ ಸಂದೇಶವನ್ನು ಅಹ್ಮದಿಯಾ ಜಮಾಅತ್ ಲೋಕದೆಲ್ಲೆಡೆ ಪ್ರಚಾರ ಮಾಡುತ್ತಿದೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **11-09-2015** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯಿದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಒಬ್ಬನು ಮುಸ್ಲಿಮನೆಂದು ವಾದಿಸುವಾಗ ಅವನು ಮುಸ್ಲಿಮನಾಗಿರುವ ಸೌಂದರ್ಯ ಪ್ರಕಟವಾಗುವುದು, ಅವನು ಇಸ್ಲಾಮ್ ಧರ್ಮದ ನೈಜ ತತ್ವಗಳನ್ನು ಮನವರಿಕೆ ಮಾಡುವಾಗ ಆಗಿದೆ. ಈಮಾನ್ ಅಥವಾ ಸತ್ಯವಿಶ್ವಾಸ ಅಂದರೆ, ಒಬ್ಬ ಮುಸ್ಲಿಮನು ತನ್ನನ್ನು ಸಂಪೂರ್ಣವಾಗಿ ಅಲ್ಲಾಹನಿಗೆ ವಿಧೇಯನನ್ನಾಗಿ ಮಾಡುವುದು ಮತ್ತು ಅಲ್ಲಾಹನ ಆಜ್ಞೆಗಳನ್ನು ಪಾಲಿಸುವುದು ಆಗಿದೆ. ಇಸ್ಲಾಮ್ ಎಂದರೆ ಅಲ್ಲಾಹನ ಆಜ್ಞೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ತನ್ನನ್ನು ಪ್ರತಿಯೊಂದು ಕೆಡುಕಿನಿಂದ ರಕ್ಷಿಸಿಕೊಳ್ಳುವುದು ಮತ್ತು ಇತರರು ಸಹ ಶಾಂತಿಯನ್ನು ಹೊಂದಿರುವಂತೆ ಮಾಡುವುದು ಆಗಿದೆ. ಇದು ಈಮಾನ್ ಮತ್ತು ಇಸ್ಲಾಮ್ ಎನ್ನುವ ಪದಗಳ ಸಂಕ್ಷಿಪ್ತ ವಿವರಣೆಯಾಗಿದೆ. ಮುಸ್ಲಿಮ್ ಲೋಕ ಇವುಗಳನ್ನು ಅರಿತುಕೊಂಡು ವರ್ತಿಸುವುದಾದರೆ ಲೋಕದಲ್ಲಿ ಶಾಶ್ವತವಾಗಿರುವ ಶಾಂತಿ ಮತ್ತು ಸಮಾಧಾನ ಸ್ಥಾಪಿತವಾಗುವುದು. ಶಾಂತಿ ಸಮಾಧಾನಗಳನ್ನು ಚೆಲ್ಲುವ ಎಂತಹ ದೃಶ್ಯಗಳನ್ನು ಕಾಣುವೆವು ಎಂದರೆ ಅದು ಲೋಕವನ್ನು ಸ್ವರ್ಗ ಸಮಾನವನ್ನಾಗಿ ಮಾಡುವುದು.

ಈ ಕಾಲದಲ್ಲಿ ಯಥಾರ್ಥ ಈಮಾನನ್ನು (ವಿಶ್ವಾಸವನ್ನು) ಹೃದಯದಲ್ಲಿ ಸ್ಥಾಪಿಸಲು ಮತ್ತು ಇಸ್ಲಾಮಿನ ಉದಾಹರಣೆಗಳನ್ನು ಲೋಕಕ್ಕೆ ತೋರಿಸಿ ಕೊಡಲು ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಕಳುಹಿಸಿಕೊಟ್ಟನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತಿಗೆ ಸೇರಿದ ನಮ್ಮ ಹೊಣೆಗಾರಿಕೆ ಏನೆಂದರೆ ನಾವು ವಾಸ್ತವಿಕ ವಿಶ್ವಾಸವನ್ನು ಹೊಂದಿ ಇಸ್ಲಾಮಿನ ನೈಜ ಉದಾಹರಣೆಯಾಗಿ ವರ್ತಿಸಿ ಈ ಕೆಲಸದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ನಾವು ಸಹಾಯಕರಾಗಬೇಕು. ಲೋಕಕ್ಕೆ ಸತ್ಯವಿಶ್ವಾಸದ ನಿಜವಾದ ರೂಪವನ್ನು ತಿಳಿಸಬೇಕು ಮತ್ತು ಶಾಂತಿಯನ್ನು ಹರಡುವವರಾಗಬೇಕು. ಅಲ್ಲಾಹನ ಅನುಗ್ರಹದಿಂದ ಅಹ್ಮದಿಯಾ ಜಮಾಅತ್ ಈ ಕೆಲಸವನ್ನು ಜಮಾಅತ್ ವ್ಯವಸ್ಥೆಯ ಮೂಲಕ ಮಾಡುತ್ತಾ ಲೋಕದಲ್ಲಿ ಎಲ್ಲ ಕಡೆಗಳಲ್ಲೂ ಕಾರ್ಯಪ್ರವೃತ್ತವಾಗಿದೆ. ಆದರೆ ಪ್ರತಿಯೊಬ್ಬ ಅಹ್ಮದಿಗೆ ಕಡ್ಡಾಯವಾಗಿರುವುದೇನೆಂದರೆ ಅವನು ತನ್ನನ್ನು ಇಸ್ಲಾಮ್ ಧರ್ಮದ ಉಪದೇಶಗಳನ್ನು ಪಾಲಿಸುವ ಮಾದರಿಯನ್ನಾಗಿ ಮಾಡಬೇಕು. ನಮ್ಮ ಪೈಕಿ ಪ್ರತಿಯೊಬ್ಬನು ಈ ಹೊಣೆಗಾರಿಕೆಯನ್ನು ಈಡೇರಿಸುವವನಾಗಬೇಕು. ಇಂದಿನ ಕಾಲದಲ್ಲಿ ಮುಸ್ಲಿಮ್ ಲೋಕದಲ್ಲಿ ದುರದೃಷ್ಟವಶಾತ್ ತಲೆದೋರಿರುವ ಹಿಂಸಾಚಾರಗಳು ಇಸ್ಲಾಮ್‌ಗೆ ಅಪಕೀರ್ತಿಕರವಾಗಿದೆ ಎಂಬುದನ್ನು ಮುಸ್ಲಿಮರು ಅರ್ಥ ಮಾಡಿಕೊಂಡಿದ್ದರೆ ಎಷ್ಟು ಚೆನ್ನಾಗಿತ್ತು. ಅವರ ಸ್ವಾರ್ಥ ಹಿತಾಸಕ್ತಿಗಳು ಇಸ್ಲಾಮ್ ಧರ್ಮಕ್ಕೆ ಎಷ್ಟು ಹಾನಿಯನ್ನು ಉಂಟುಮಾಡುತ್ತಿದೆ ಎಂದೂ ಈ ಉಗ್ರಗಾಮಿ ಗುಂಪುಗಳು ಎದ್ದೇಳಲು ಕಾರಣವೇ ಎಲ್ಲ ಹಂತಗಳಲ್ಲೂ ಸ್ವಾರ್ಥ ಹಿತಾಸಕ್ತಿಗಳು ಬಲಿಷ್ಟವಾಗಿರುವುದಾಗಿದೆ ಎಂದು ಅವರು ಅರ್ಥ ಮಾಡಿಕೊಂಡಿದ್ದರೆ ಎಷ್ಟು ಚೆನ್ನಾಗಿತ್ತು. ಅವರು ಸ್ವತಃ ಶಾಂತಿಯನ್ನು ಹೊಂದಿರುವುದಿಲ್ಲ. ಅನ್ಯರಿಗೂ ಶಾಂತಿಯನ್ನು ತಲಪಿಸುವುದಿಲ್ಲ. ಸರಕಾರಗಳು ಪ್ರಜೆಗಳಿಗೆ ನ್ಯಾಯ ನೀಡುವುದಿಲ್ಲ. ಪ್ರಜೆಗಳು ಸರಕಾರದ ಬಗ್ಗೆ ಇರುವ ತಮ್ಮ ಕರ್ತವ್ಯಗಳನ್ನು ಈಡೇರಿಸುವುದೂ ಇಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸ್ಥಳದಲ್ಲಿ ಈ ಎರಡು ಅನ್ಯಾಯಗಳ ಬಗ್ಗೆ ವಿವರಿಸುತ್ತಾ ಹೀಗೆ ಹೇಳಿದರು: "ಸರಕಾರಗಳು ತಮ್ಮ ಹೊಣೆಗಾರಿಕೆಗಳನ್ನು ಹಾಗೂ ಪ್ರಜೆಗಳು ತಮ್ಮ ಹೊಣೆಗಾರಿಕೆಗಳನ್ನು ಈಡೇರಿಸುತ್ತಾ ಇದ್ದರೆ ದೇಶದಲ್ಲಿ ಶಾಂತಿ ಸ್ಥಾಪಿತವಾಗುವುದು. ಪ್ರಜೆಗಳ ಕಡೆಯಿಂದ ಯಾವುದಾದರೂ ಅನ್ಯಾಯಕರ ವರ್ತನೆ ಉಂಟಾದರೆ ಅಥವಾ ಆಳುವವರು ಯಾವುದಾದರೂ ಅನ್ಯಾಯ ಮಾಡಿದರೆ ಆಗ ದೇಶದಲ್ಲಿ ಶಾಂತಿ ಭಂಗ ಉಂಟಾಗುವುದು."

ದುರದೃಷ್ಟವಶಾತ್ ಇಂದಿನ ಕಾಲದಲ್ಲಿ ಮುಸ್ಲಿಮ್ ದೇಶಗಳಲ್ಲಿ ನಾವು ಇದನ್ನೇ ಕಾಣುತ್ತಿದ್ದೇವೆ. ಇಸ್ಲಾಮನ್ನು ವಿರೋಧಿಸುವ ಶಕ್ತಿಗಳು ಇದರಿಂದ ತಮ್ಮ ಸ್ವಾರ್ಥ ಲಾಭಗಳನ್ನು ಗಳಿಸುತ್ತಿದ್ದಾರೆ. ಒಂದು ಕಡೆ ಅವರು ಜಗಳ ವರ್ಧಿಸುವಂತೆ ಮಾಡಲು ಸರಕಾರ ಮತ್ತು ಪ್ರಜೆಗಳ ಗುಂಪುಗಳಿಗೆ ಸಹಾಯ ನೀಡುತ್ತಿದ್ದಾರೆ. ಇನ್ನೊಂದು ಕಡೆ ಭೀಕರವಾದಿ ಗುಂಪುಗಳ ಕೃತ್ಯಗಳಿಗೆ ಪ್ರಸಿದ್ಧಿ ನೀಡುತ್ತಾರೆ. ಪ್ರೆಸ್ ಮತ್ತು ಸಂಪರ್ಕ ಮಾಧ್ಯಮಗಳು ಈ ಗುಂಪುಗಳಿಗೆ ಬಹಳ ಪ್ರಾಮುಖ್ಯತೆ ನೀಡುತ್ತದೆ. ಆ ಮೂಲಕ ಇವರು ಇಸ್ಲಾಮನ್ನು ಅಪಕೀರ್ತಿಗೆ ಗುರಿಪಡಿಸುತ್ತಿದ್ದಾರೆ. ನಾನು ಕೆಲವು ಸಂದರ್ಶನಗಳಲ್ಲಿ ಸಂಪರ್ಕ ಮಾಧ್ಯಮಗಳೊಂದಿಗೆ ಹೇಳಿದ್ದೆ– ಇಸ್ಲಾಮ್ ಧರ್ಮದ ವಿರುದ್ಧ ದ್ವೇಷ ಪ್ರಚಾರ ಮಾಡಲು ಅದನ್ನು ತೀವ್ರಗಾಮಿ ಭೀಕರ ಧರ್ಮವೆಂದು ಪ್ರಚಾರ ಮಾಡುವುದರಲ್ಲಿ ಸಂಪರ್ಕ ಮಾಧ್ಯಮಗಳ ಪಾತ್ರ ಬಹಳ ಇದೆ ಎಂದು ನಾನು ಹೇಳಿದ್ದೆ. ಸಂಪರ್ಕ ಮಾಧ್ಯಮಗಳು ನ್ಯಾಯಪಾಲನೆ ಮಾಡುವುದಿಲ್ಲ. ಯಾವುದಾದರೂ ಗುಂಪಿನ ಅಥವಾ ಮುಸ್ಲಿಮರೆಂದು ಹೇಳಿಕೊಳ್ಳುವ ಸರಕಾರಗಳ ರಾಜಕೀಯ ಅಭಿಲಾಷೆಗಳಿಗೆ ಇಸ್ಲಾಮ್ ಧರ್ಮದ ಹೆಸರನ್ನು ಬಳಸಿ ನೀವು ಇಸ್ಲಾಮೀ ತತ್ವಗಳನ್ನು ಅಪಕೀರ್ತಿಗೆ ಗುರಿಪಡಿಸುತ್ತೀರಿ. ನೀವು ಅವುಗಳಿಗೆ ಎಷ್ಟು ಪ್ರಚಾರ ನೀಡುತ್ತಿರುವಿರೆಂದರೆ ಇಸ್ಲಾಮಿನ ಬಗ್ಗೆ ಲೋಕದ ಜನರ ಅಭಿಪ್ರಾಯವನ್ನೇ ಬದಲಾಯಿಸಿಬಿಡುತ್ತೀರಿ. ಅಥವಾ ಇಸ್ಲಾಮ್ ಬಗ್ಗೆ ತೀರಾ ಅರಿತಿರದ ಜನರು ಎಂತಹ ಕಲ್ಪನೆ ಇಸ್ಲಾಮ್ ಬಗ್ಗೆ ಹೊಂದುವಂತೆ ಮಾಡಿರುವಿರಿ ಎಂದರೆ, ಇಸ್ಲಾಮಿನ ಹೆಸರು ಆಲಿಸಿದ ಕೂಡಲೇ ಅವರ ಮುಖಭಾವ ಬದಲಾವಣೆ ಹೊಂದುತ್ತದೆ. ನಿಮ್ಮ ಸ್ವಾರ್ಥಹಿತಾಸಕ್ತಿ ಇರುವಲ್ಲಿನ

ಸಮಾಚಾರಗಳನ್ನು ನೀವು ಮರೆಮಾಚುತ್ತಲೂ ಇದ್ದೀರಿ. ಸಾವಿರಾರು, ಲಕ್ಷಗಟ್ಟಲೆ ಸಂಖ್ಯೆಯ ಮುಸ್ಲಿಮರು ಶಾಂತಿಯ ಬಗ್ಗೆ ಮಾತನಾಡುತ್ತಿದ್ದರೂ ಅವರ ಬಗ್ಗೆ ಸಂಪರ್ಕ ಮಾಧ್ಯಮಗಳು ಪ್ರಸ್ತಾಪಿಸುವುದೇ ಇಲ್ಲ. ಅಥವಾ ಭೀಕರ ಕೃತ್ಯ ಮಾಡುವವರಿಗೆ ನೀಡುವಂತಹ ಪ್ರಚಾರವನ್ನು ಶಾಂತಿ ಪ್ರತಿಪಾದಿಸುವ ಜನರಿಗೆ ಸಂಪರ್ಕ ಮಾಧ್ಯಮಗಳು ನೀಡುವುದಿಲ್ಲ. ಪ್ರಪಂಚದಲ್ಲಿ ಶಾಂತಿ ಸ್ಥಾಪನೆಯಾಗುವ ಬಗ್ಗೆ ಎಲ್ಲರಿಗಿಂತ ಮಿಗಿಲಾಗಿ ಕೆಲಸ ಮಾಡುವವರು ಅಹ್ಮದಿಯಾ ಜಮಾಅತಿನವರಾಗಿದ್ದಾರೆ. ಅದು ಪ್ರೀತಿಯನ್ನು ಪ್ರತಿಪಾದಿಸುವ ಇಸ್ಲಾಮೀ ತತ್ವಗಳನ್ನು ಪ್ರಚಾರ ಮಾಡುತ್ತಿದೆ. ಲೋಕದಾದ್ಯಂತ ಈ ಕೆಲಸವನ್ನು ನಿಷ್ಠೆಯಿಂದ ಮಾಡುತ್ತಿದೆ. ಇದರ ಪರಿಣಾಮವಾಗಿ ಶಾಂತಿಯ ಪತಾಕೆಯ ಕೆಳಗೆ ಶಾಂತಿಯನ್ನು ಹರಡಲು ಲಕ್ಷಾಂತರ ಜನರು ಅಹ್ಮದಿಯಾ ಜಮಾಅತಿಗೆ ಸೇರುತ್ತಿದ್ದಾರೆ. ಅದರ ಬಗ್ಗೆ ಸಂಪರ್ಕ ಮಾಧ್ಯಮದವರಿಗೆ ನಾವು ತಿಳಿಸಿದರೂ ಸಹ ಅವರು ಅದರ ಬಗ್ಗೆ ಗಮನ ಹರಿಸುವುದಿಲ್ಲ.

ಈ ದಿನ ನಾನು ಕೆಲವು ಜನರ ಉದಾಹರಣೆ ನೀಡುವೆನು. ಅವರು ಅಹ್ಮದಿಯಾ ಜಮಾಅತ್ ಮೂಲಕ ಇಸ್ಲಾಮಿನ ಯಥಾರ್ಥ ಮುಖವನ್ನು ಕಂಡರು ಮತ್ತು ಅದು ಅವರ ಹೃದಯಗಳಲ್ಲಿ ಪ್ರಭಾವ ಬೀರಿತು. ಅವರಲ್ಲಿ ಮುಸ್ಲಿಮೇತರರೂ ಇದ್ದಾರೆ, ಮುಸ್ಲಿಮರೂ ಇದ್ದಾರೆ. ಅನೇಕರು ಇಸ್ಲಾಮಿನ ಸುಂದರ ಚಿತ್ರವನ್ನು ನೋಡಿ ಇಸ್ಲಾಮ್ ಧರ್ಮವನ್ನು ಸೇರಿದರು. ಅವರು ಹೇಳಿದರು: ಇಸ್ಲಾಮಿನ ಈ ಸುಂದರ ಉಪದೇಶಗಳು ಲೋಕಕ್ಕೆ ಅವಶ್ಯಕವಾಗಿವೆ. ಸಂಪರ್ಕ ಮಾಧ್ಯಮಗಳು ಇಸ್ಲಾಮಿನ ಬಗ್ಗೆ ಕೆಟ್ಟ ಪ್ರಭಾವ ನಮ್ಮ ಮೇಲೆ ಉಂಟುಮಾಡಿ ನಮ್ಮ ಯೋಚನೆಗಳಿಗೆ ಬೀಗ ಬಿಗಿದಿತ್ತು. ಅಹ್ಮದಿಯಾ ಜಮಾಅತ್ ಆ ತಪ್ಪು ಗ್ರಹಿಕೆಗಳನ್ನು ದೂರ ಸರಿಸಿತು ಎಂದು ಅವರು ಹೇಳಿದ್ದಾರೆ. ಬೆನಿನ್ ದೇಶದ ಚೆರಿ ಎಂಬಲ್ಲಿನ ಅಪಾಸ್ಟಾಲಿಕ್ ಚರ್ಚ್‌ಗೆ ಸೇರಿದ ಓರ್ವ ಪಾದರಿ ಅಲ್ಲಿನ ಮಸ್‌ಜಿದ್ ಉದ್ಘಾಟನೆಯ ಸಂದರ್ಭದಲ್ಲಿ ಹೇಳಿದರು: "ಇಂದಿನ ದಿನ ನನ್ನ ಜೀವಿತದ ಒಂದು ಅದ್ಭುತ ದಿನವಾಗಿದೆ. ಇಂದು ಮುಸ್ಲಿಮರು ಮತ್ತು ಕ್ರೈಸ್ತರು ಒಂದು ಸ್ಥಳದಲ್ಲಿ ಜಮಾಯಿಸಿದ್ದಾರೆ. ಅಹ್ಮದಿಯಾ ಜಮಾಅತ್ ನಮ್ಮನ್ನು ಒಗ್ಗೂಡಿಸಿದೆ ಎನ್ನುವುದರ ಬಗ್ಗೆ ಸಂಶಯವಿಲ್ಲ. ನಾನು ಅಹ್ಮದಿಯ್ಯತ್‌ಗೆ ಸಲಾಮ್ ಅರ್ಪಿಸುತ್ತೇನೆ."

ನ್ಯಾಯ ಪ್ರಿಯರಾದ ರಾಜಕಾರಣಿಗಳು ಸಹ ಅಹ್ಮದಿಯಾ ಜಮಾಅತಿನ ಕೆಲಸಗಳಿಂದ ಪ್ರಭಾವಿತರಾಗಿದ್ದಾರೆ. ಲಂಡನ್ ಜಲ್ಸದ ಸಂದರ್ಭದಲ್ಲಿ ಸಹ ಕೆಲವು ರಾಜಕಾರಣಿಗಳು ನಿಮ್ಮ ಮುಂದೆ ತಮ್ಮ ಅಭಿಪ್ರಾಯಗಳನ್ನು ಹೇಳಿದ್ದಾರೆ. ಈಗ ಅಲ್ಲಾಹನ ಅನುಗ್ರಹದಿಂದ ಲೋಕದಲ್ಲಿ ಪ್ರತಿಯೊಂದು ಸ್ಥಳದಲ್ಲಿ ಅಹ್ಮದಿಯಾ ಜಮಾಅತ್ ಪ್ರಚಾರ ಮಾಡುತ್ತಿರುವ ಇಸ್ಲಾಮ್ ಧರ್ಮ ತತ್ವಗಳನ್ನು ಮತ್ತು ಅಹ್ಮದಿಯರು ಇಸ್ಲಾಮ್ ಧರ್ಮ ಪ್ರಕಾರ ವರ್ತಿಸುವುದನ್ನು ಲೋಕವು ಮೆಚ್ಚುತ್ತಾ ಇದೆ. ಅಹ್ಮದಿಯಾ ಜಮಾಅತಿನ ತತ್ವೋಪದೇಶಗಳನ್ನೂ ಕಾರ್ಯಕ್ರಮಗಳನ್ನೂ ಬಹಳವಾಗಿ ಪ್ರಶಂಸಿಸುತ್ತಾ ಇದು ಎಷ್ಟು ಸುಂದರವಾದ ಉಪದೇಶಗಳಾಗಿವೆ ಎಂದು ಅವರು ಹೇಳುತ್ತಿದ್ದಾರೆ. ಬೆನಿನ್ ದೇಶದ ಸಾರಿಗೆ ವಿಭಾಗದ ಮಂತ್ರಿ ಹೀಗೆ ಹೇಳಿದರು: "ಬೆನಿನ್ ದೇಶದಲ್ಲಿ ಅಹ್ಮದಿಯಾ ಜಮಾಅತ್ ಮಾಡುವ ಸಾಮಾಜಿಕ ಸೇವೆಗಳು, ಪ್ರೀತಿ ಮತ್ತು ಶಾಂತಿ ವರ್ಧಿಸುವ ಕೆಲಸಗಳು ಪ್ರಥಮ ಸ್ಥಾನದಲ್ಲಿವೆ. ಶಾಂತಿ ಮತ್ತು ಪ್ರೀತಿಯನ್ನು ಹರಡುವ ಕಾರ್ಯದಲ್ಲಿ ಅಹ್ಮದಿಯಾ ಜಮಾಅತ್ ಮಾಡುವ ಕೆಲಸಗಳಿಗೆ ನಾನು ಅಭಿನಂದಿಸುತ್ತೇನೆ" ಎಂದು ಹೇಳಿದರು.

ಕಬಾಬೀರ್‌ನಲ್ಲಿರುವ ನಮ್ಮ ಮುಬಲ್ಲಿಗ್ ಹೀಗೆ ಬರೆಯುತ್ತಾರೆ: ಕೆಲವು ದಿನಗಳ ಹಿಂದೆ ಒಬ್ಬ ಯಹೂದಿ ಅಧ್ಯಾಪಕ ತನ್ನ ಶಾಲೆಯ ವಿದ್ಯಾರ್ಥಿಗಳೊಂದಿಗೆ ನಮ್ಮ ಮಸ್‌ಜಿದ್ ಎದುರಿಗೆ ಬಂದು ಅವರಿಗೆ ಅಹ್ಮದಿಯಾ ಜಮಾಅತ್ ಬಗ್ಗೆ ಪರಿಚಯ ಮಾಡಿಕೊಡುತ್ತಿದ್ದರು. ಆ ಅಧ್ಯಾಪಕನಿಗೆ ಪ್ರಾಯಶಃ ಅರಬಿ ಭಾಷೆ ಸಹ ತಿಳಿದಿತ್ತು. ನಮ್ಮ ಮಸ್‌ಜಿದ್‌ನ ಬಾಗಿಲಲ್ಲಿ ಹೀಗೆ ಬರೆದಿತ್ತು– **ವ ಮನ್ ದಖಲಹೂ ಕಾನ ಆಮಿನ.** ಆ ಅಧ್ಯಾಪಕ ಈ ಅರಬಿ ವಾಕ್ಯದ ಅರ್ಥವನ್ನು ವಿದ್ಯಾರ್ಥಿಗಳಿಗೆ ವಿವರಿಸುತ್ತಾ ಹೇಳಿದರು: ಈ ವಾಕ್ಯದ ಅರ್ಥ "ಇದರೊಳಗೆ ಪ್ರವೇಶಿಸುವವನು ಸುರಕ್ಷಿತನಾಗಿರುವನು" ಎಂದಾಗಿದೆ. ಆದರೆ ಇದರ ಉದಾಹರಣೆ ಅಹ್ಮದಿಯರ ಮಸ್‌ಜಿದ್‌ಗಳಲ್ಲಿ ಮಾತ್ರ ಕಾಣಲು ಸಿಗುವುದು ಎಂದು ಆ ಅಧ್ಯಾಪಕ ಹೇಳಿದರು.

ಅಲ್ಲಾಹನು ಜನರ ಶ್ರದ್ಧೆ ಅಹ್ಮದಿಯಾ ಜಮಾಅತಿನ ಕಡೆಗೆ ಹೇಗೆ ತಿರುಗಿಸುತ್ತಾನೆ ಎನ್ನುವುದರ ಬಗ್ಗೆ ಒಂದು ಉದಾಹರಣೆ ನೋಡಿರಿ: ಬೆನಿನ್ ದೇಶದ ಮೊಯುನಾಮಿ ಎಂಬ ಸ್ಥಳದಲ್ಲಿ ಬಹುದೇವಾರಾಧಕ ಜನರು ವಾಸವಾಗಿದ್ದಾರೆ. ಅಲ್ಲಿಗೆ ನಮ್ಮ ಮುಬಲ್ಲಿಗ್ ಪ್ರಚಾರಕ್ಕೆ ಹೋದರು. ಅವರು ಭಾಷಣ ಮಾಡಿದ ನಂತರ ಹೇಳಿದರು: ಯಾರಿಗಾದರೂ ಏನಾದರೂ ಪ್ರಶ್ನೆ ಕೇಳಬೇಕಾಗಿದ್ದರೆ ಕೇಳಬಹುದು. ಆಗ ಒಬ್ಬ ಹಿರಿಯ ವ್ಯಕ್ತಿ ಹೇಳಿದರು– 'ನಿಮ್ಮ ಭಾಷಣ ಆಲಿಸಿದಾಗ ಇಸ್ಲಾಮಿನ ಬಗ್ಗೆ ನನಗಿದ್ದ ತಪ್ಪು ಗ್ರಹಿಕೆಗಳು ನೀಗಿದುವು. ನಾನು ಇಸ್ಲಾಮ್ ಮತ್ತು ಅಹ್ಮದಿಯತ್ ಅಂಗೀಕರಿಸುವ ಇಲ್ಲಿನ ಪ್ರಥಮ ವ್ಯಕ್ತಿ ಆಗಿದ್ದೇನೆ' ಎಂದು ಹೇಳಿದರು. ಅನಂತರ ಆ ಗ್ರಾಮದ ನಲ್ವತ್ತು ಜನರು ಅಹ್ಮದಿಯಾ ಜಮಾಅತಿಗೆ ಸೇರಿದರು. ಹಾಗೆ ಅಲ್ಲಿ ಒಂದು ಹೊಸ ಜಮಾಅತ್ ಸ್ಥಾಪಿಸಲ್ಪಟ್ಟಿತು. ಕೂಡಲೆ ಅಲ್ಲಿನ ಜನರಲ್ಲಿ ಬದಲಾವಣೆಗಳು ಉಂಟಾದುವು. ಅವರು ಎಲ್ಲ ಸಾಂಪ್ರದಾಯಿಕ ಆಚಾರಗಳನ್ನು ತ್ಯಜಿಸಿದರು. ಅಲ್ಲಿನ ಆ ಹಿರಿಯರು ಒಂದು ದಿನ ಹೇಳಿದರು: ಅಹ್ಮದಿಯಾದ ನಂತರ ನನ್ನ ಶರೀರದಲ್ಲಿ ಹೊಸ ಒಂದು ಆತ್ಮ ಬಂದಿದೆ. ನಾನೆಲ್ಲಿದ್ದರೂ ನನ್ನ ಆತ್ಮ ನನ್ನ ಮನಸಾಕ್ಷಿಯನ್ನು ಎಚ್ಚರಗೊಳಿಸುತ್ತದೆ ಮತ್ತು ಹೇಳುತ್ತದೆ– "ನಮಾಝ್ ಮಾಡುವ ಸಮಯವಾಯಿತು" ಎಂದು ನನ್ನನ್ನು ಎಚ್ಚರಿಸುತ್ತದೆ. ಈ ರೀತಿ ನನ್ನ ಆತ್ಮಕ್ಕೆ ನೆಮ್ಮದಿ ಮತ್ತು ಶರೀರಕ್ಕೆ ಸುಖ ಸಿಗುತ್ತದೆ ಎಂದು ಅವರು ಹೇಳುತ್ತಾರೆ. ಆದುದರಿಂದ ನಮ್ಮ ಪೈಕಿ ನಮಾಝ್ ಬಗ್ಗೆ ಉದಾಸೀನರಾಗುವವರು ನಮಾಝ್ ಬಗ್ಗೆ ಶ್ರದ್ಧೆ ವಹಿಸಬೇಕು. ಹೊಸದಾಗಿ ಜಮಾಅತ್‌ಗೆ ಸೇರುವವರು ಆರಾಧನೆಗಳ ಬಗ್ಗೆ ಶ್ರದ್ಧೆ ವಹಿಸುತ್ತಿದ್ದಾರೆ. ಅವರು ಬಹಳ ಲಕ್ಷ್ಯ ನೀಡಿ ನಮಾಝ್ ಅನುಷ್ಠಿಸುತ್ತಿದ್ದಾರೆ.

ಇಸ್ಲಾಮಿನ ವಾಸ್ತವಿಕ ಉಪದೇಶಗಳು ಇಂದಿನ ಕಾಲದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮೂಲಕ ಮಾತ್ರ ತಲಪಿಸಲು ಸಾಧ್ಯ. ಅಲ್ಲಾಹನು ಹಝ್ರತ್ ಮಸೀಹ್

ಮೌಊದ್ ಅಲೈಹಿಸ್ಸಲಾಮರ ಉಪದೇಶಗಳನ್ನು ಹೇಗೆ ಜನರಿಗೆ ತಲಪಿಸುತ್ತಿದ್ದಾನೆ ಮತ್ತು ಅವುಗಳು ಜನರ ಮೇಲೆ ಯಾವ ರೀತಿ ಪ್ರಭಾವ ಬೀರುತ್ತವೆ ಎಂಬುದರ ಬಗ್ಗೆ ಒಂದು ಉದಾಹರಣೆ ನೀಡುತ್ತೇನೆ: ಗಿನಿ ದೇಶದ ಕನಾಕರಿ ಎಂಬಲ್ಲಿ ನಮ್ಮ ಒಬ್ಬ ಅಹ್ಮದಿ ಅಬೂಬಕರ್ ಸಾಹೇಬರು ತಬ್ಲೀಗ್ ವ್ಯವಸ್ಥೆ ಮಾಡುತ್ತಾರೆ. ಅವರು ವರದಿ ಮಾಡುತ್ತಾರೆ: ನಾವು ಜನರಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಂದೇಶ ತಲಪಿಸಿದೆವು. ನಾವು ತಬ್ಲೀಗ್ ಮಾಡುತ್ತಾ ಇದ್ದೆವು. ಆಗ ಅಲ್ಲಿಗೆ ಒಬ್ಬ ಮೌಲವಿ ಜಗಳ ಮಾಡಲು ಬಂದರು. ಆ ಮೌಲವಿ ಸ್ವಲ್ಪ ಸಮಯ ನಮ್ಮ ಮಾತುಗಳನ್ನು ಆಲಿಸುತ್ತಾ ಕುಳಿತರು. ಅನಂತರ ಎದ್ದು ನಿಂತು ಸಿಟ್ಟಿನಿಂದ ಹೇಳಿದರು: 'ನಿಮಗೆ ತಬ್ಲೀಗ್ ಮಾಡಲು ಇಲ್ಲಿ ಅನುಮತಿ ಇಲ್ಲ. ನಾನು ಪೋಲೀಸರ ಮುಖಾಂತರ ನಿಮ್ಮನ್ನು ಬಂಧಿಸುತ್ತೇನೆ.' ಆಗ ಅಲ್ಲಿನ ಯುವಕರು ಎದ್ದು ನಿಂತು ಆ ಮೌಲವಿಯೊಂದಿಗೆ ಸಿಟ್ಟಿನಿಂದ ಹೇಳಿದರು: ನೀವು ನಮ್ಮನ್ನು ಇಲ್ಲಿಯವರೆಗೆ ದಾರಿತಪ್ಪಿಸುತ್ತಾ ಇದ್ದಿರಿ. ನೀವು ಕೂಡಲೆ ಇಲ್ಲಿಂದ ಹೊರಟು ಹೋಗಿರಿ ಎಂದು ಹೇಳಿದರು. ಆ ಮೌಲವಿ ನಾಚಿಕೆಗೊಂಡು ಅಲ್ಲಿಂದ ಹೊರಟು ಹೋದರು. ಅಲ್ಲಿ ಸಭೆಯಲ್ಲಿ ಸೇರಿದ್ದ ಹದಿನೈದು ಜನರು ಆಗ ಅಹ್ಮದಿಯಾ ಜಮಾಅತ್‌ಗೆ ಸೇರಿದರು.

ಗಿನಿ ಕನಾಕರಿಯ ಇನ್ನೊಂದು ಘಟನೆ ಹೀಗಿದೆ– ಅಲ್ಲಿನ ಜನರಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆಗಮನದ ಉದ್ದೇಶವನ್ನು ನಾವು ತಿಳಿಸಿದೆವು. ಲೋಕದ ಅಂತಿಮ ಕಾಲಘಟ್ಟದಲ್ಲಿ ಗೋಚರಿಸುವ ಚಿಹ್ನೆಗಳ ಬಗ್ಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ವಿವರಿಸಿದ್ದಾರೆ. ಆ ಚಿಹ್ನೆಗಳ ಪ್ರಕಾರ ವಾಗ್ದತ್ತ ಮಸೀಹ್ ಆಗಮಿಸಿರುವರು ಎಂದು ತಿಳಿಸಿದೆವು. ಆಗ ಜನರ ಮೇಲೆ ಅಸಾಧಾರಣ ಪ್ರಭಾವ ಉಂಟಾಯಿತು. ಅಲ್ಲಿನ ಪ್ರಾದೇಶಿಕ ಮುಬಲ್ಲಿಗ್ ತಬ್ಲೀಗ್ ಮಾಡುತ್ತಾ ಇದ್ದರು. ಅವರು ಹೇಳುತ್ತಾರೆ– ಒಂದು ವಾರದ ತಬ್ಲೀಗ್ ನಂತರ ಒಂದು ಗ್ರಾಮದ ಇಮಾಮರು ಮಸ್‌ಜಿದ್ ಸಮೇತ ಜಮಾಅತಿಗೆ ಸೇರಿದರು. ಅನಂತರ ಹತ್ತಿರದ ನಾಲ್ಕೈದು ಗ್ರಾಮಗಳ ಜನರು ಬೈಅತ್ ಮಾಡಿ ಜಮಾಅತಿಗೆ ಸೇರಿದರು. ಇನ್ನಷ್ಟು ಜನರು ನಮ್ಮನ್ನು ಸಂಪರ್ಕಿಸುತ್ತಿದ್ದಾರೆ. ಜನರು ನೈಜ ಇಸ್ಲಾಮ್ ಆಗಿರುವ ಅಹ್ಮದಿಯಾ ಜಮಾಅತಿಗೆ ಸೇರಲು ಬಹಳ ಉತ್ಸುಕರಾಗಿದ್ದಾರೆ.

ಆಫ್ರಿಕದ ಒಂದು ದೇಶದಲ್ಲಿ ನಮ್ಮ ಬುಕ್ ಸ್ಟಾಲ್‌ಗೆ ಇಬ್ಬರು ಮುಸ್ಲಿಮ್ ಯುವಕರು ಬಂದರು. ಅವರಿಗೆ ಇಮಾಮ್ ಮಹ್‌ದಿ ಅಲೈಹಿಸ್ಸಲಾಮ್ ಆಗಮಿಸಿದ ಬಗ್ಗೆ ತಿಳಿಸಲಾಯಿತು. ಜಮಾಅತಿನ ಪರಿಚಯ ಮಾಡಿಕೊಡಲಾಯಿತು. ಫ್ರೆಂಚ್ ಭಾಷೆಯಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬಗ್ಗೆ ಬರೆದ ಪುಸ್ತಕ ಓದಲು ನೀಡಲಾಯಿತು. ಅಂತಿಮ ಕಾಲಘಟ್ಟದಲ್ಲಿ ಮುಸ್ಲಿಮರ ದುರವಸ್ಥೆಯ ಬಗ್ಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಭವಿಷ್ಯವಾಣಿಗಳನ್ನು ವಿವರಿಸಲಾಯಿತು. ವಾಗ್ದತ್ತ ಮಸೀಹರ ಆಗಮನದ ಬಗ್ಗೆ ಸಹ ತಿಳಿಸಲಾಯಿತು. ಅಹ್ಮದಿಯ್ಯತ್ ಎಂದರೆ ನೈಜ ಇಸ್ಲಾಮ್ ಎಂದು ವಿವರಿಸಿಕೊಡಲಾಯಿತು. ಅದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಉಪದೇಶಿಸಿದ್ದೇ ಆಗಿದೆ ಎಂದು ತಿಳಿಸಲಾಯಿತು. ಇಂದಿನ ಕಾಲದ ಮುಸ್ಲಿಮರು ನೈಜ ಇಸ್ಲಾಮನ್ನು ವಿರೂಪಗೊಳಿಸಿದ ಬಗ್ಗೆ ವಿವರಿಸಿಕೊಡಲಾಯಿತು. ಯಥಾರ್ಥದಲ್ಲಿ ಇಸ್ಲಾಮ್ ಪ್ರೀತಿ ಮತ್ತು ಶಾಂತಿಯನ್ನು ಪ್ರತಿಪಾದಿಸುವ ಧರ್ಮ ಎಂದು ಅವರಿಗೆ ತಿಳಿಸಲಾಯಿತು. ಆಗ ಆ ಇಬ್ಬರು ಯುವಕರು ಹೇಳಿದರು: ನಾವು ಮುಸ್ಲಿಮರೇ ಆಗಿದ್ದೇವೆ. ಆದರೆ ಮುಸ್ಲಿಮರ ಬರ್ಬರ ಕೃತ್ಯಗಳು ಮತ್ತು ಭೀತಿವಾದ ನಮ್ಮನ್ನು ಎಷ್ಟು ಸಂಕಷ್ಟಪಡಿಸಿದೆ ಎಂದರೆ ನಾವು ಕ್ರೈಸ್ತರಾಗಲು ಸಿದ್ಧರಾಗಿದ್ದೆವು. ಈಗ ಅಹ್ಮದಿಯಾ ಜಮಾಅತಿನ ಮಾತುಗಳನ್ನು ಆಲಿಸಿ ನಮಗೆ ತಿಳಿಯಿತು– ಇಸ್ಲಾಮ್ ಧರ್ಮವು ಈ ಮುಲ್ಲಾಗಳು ಪ್ರತಿಪಾದಿಸುವಂತಹ ಧರ್ಮವಲ್ಲ ಎಂದು. ಅವರು ನಮಗೆ ಕೃತಜ್ಞತೆ ಅರ್ಪಿಸಿದರು. ಇಸ್ಲಾಮ್ ಧರ್ಮ ಬಿಟ್ಟು ಕ್ರೈಸ್ತರಾಗುವುದರಿಂದ ನಮ್ಮನ್ನು ನೀವು ರಕ್ಷಿಸಿದಿರಿ ಎಂದು ಅವರು ಹೇಳಿದರು.

ಮುಸ್ಲಿಮೇತರರ ಹೃದಯಗಳಲ್ಲೂ ನೈಜ ಇಸ್ಲಾಮನ್ನು ನೋಡಿ ಅದರ ಸಂದೇಶ ಪ್ರಚಾರಗೊಳಿಸಬೇಕೆಂಬ ಅಭಿಲಾಷೆ ಉಂಟಾಗುತ್ತದೆ. ಅವರು ಸಹ ನಮಗೆ ಬೆಂಬಲ ನೀಡಲು ಬಯಸುತ್ತಾರೆ. ಜಪಾನ್ ದೇಶದ ನಮ್ಮ ಮುಬಲ್ಲಿಗ್ ಬರೆಯುತ್ತಾರೆ: ಬೌದ್ಧ ಧರ್ಮದ ಒಬ್ಬ ಜಪಾನ್ ದೇಶ ನಿವಾಸಿ ನಮ್ಮ ಬುಕ್ ಸ್ಟಾಲಿಗೆ ಬಂದರು. ಅವರಿಗೆ ಇಸ್ಲಾಮ್ ಧರ್ಮದ ಬಗ್ಗೆ ಪರಿಚಯ ಮಾಡಿಕೊಡಲಾಯಿತು. ಅನ್ಯ ಧರ್ಮಗಳ ಬಗ್ಗೆ ಇಸ್ಲಾಮ್ ಧರ್ಮದ ಉಪದೇಶಗಳ ಉದಾಹರಣೆಗಳನ್ನು ಪವಿತ್ರ ಖುರ್‌ಆನ್ ವಚನಗಳ ಮೂಲಕ ತೋರಿಸಿಕೊಡಲಾಯಿತು. ಆಗ ಅವರು ನಮಗೆ ಕೃತಜ್ಞತೆ ಅರ್ಪಿಸಿ ಹೇಳಿದರು: ಈ ಸುಂದರ ತತ್ವಗಳು ಲೋಕಕ್ಕೆ ತಿಳಿಸಲು ಯೋಗ್ಯವಾಗಿವೆ. ಅವುಗಳ ಮೂಲಕ ಇಸ್ಲಾಮ್ ಬಗ್ಗೆ ಇರುವ ತಪ್ಪು ಗ್ರಹಿಕೆಗಳು ದೂರ ಸರಿಯುವುವು. ಒಂದು ದಿವಸ ಅವರು ನಮ್ಮ ಬುಕ್ ಸ್ಟಾಲಿನಲ್ಲಿ ಬೆಳಿಗ್ಗೆ ಹತ್ತರಿಂದ ಸಂಜೆ 4 ಗಂಟೆಗಳ ತನಕ ಇದ್ದರು. ಅವರು ಬೌದ್ಧ ಮತಾವಲಂಬಿಯಾಗಿದ್ದರೂ ಉಚ್ಚಸ್ವರದಲ್ಲಿ ಇಸ್ಲಾಮ್ ಶಾಂತಿಯ ಧರ್ಮ ಎಂದು ಹೇಳುತ್ತಿದ್ದರು. ಅವರು ನಮ್ಮ ಕರಪತ್ರಗಳನ್ನು ಹಂಚುತ್ತಿದ್ದರು.

ಇಂಡಿಯಾದಲ್ಲಿ ಕರ್ನಾಟಕದ ಗದಗ್ ಎಂಬ ಪಟ್ಟಣದಲ್ಲಿ ನಮ್ಮ ಬುಕ್ ಸ್ಟಾಲ್‌ಗೆ ಒಬ್ಬ ಮುಸ್ಲಿಮೇತರ ವ್ಯಕ್ತಿ ಬಂದು ನಮ್ಮ ಸ್ಟಾಲ್ ನೋಡಿ ಹೇಳಿದರು: ನಾನು ಬಹಳ ಬುಕ್ ಸ್ಟಾಲ್‌ಗಳನ್ನು ನೋಡಿದ್ದೇನೆ. ಆದರೆ ಶಾಂತಿ ಸಮಾಧಾನಗಳ ಸಂದೇಶ ನೀಡುವ ಮತ್ತು ಇಸ್ಲಾಮ್ ಧರ್ಮದ ಸುಂದರ ತತ್ವಗಳನ್ನು ಜನರಿಗೆ ತಲಪಿಸುವ ಇಂತಹ ಜನರನ್ನು ನಾನು ಇಂದಿನ ತನಕ ಎಲ್ಲಿಯೂ ಕಂಡಿಲ್ಲ ಎಂದು ಹೇಳಿದರು. ಅವರು ಬಹಳ ಪ್ರಭಾವಿತರಾದರು. ಅವರು ನಮ್ಮ ಅನೇಕ ಪುಸ್ತಕಗಳನ್ನು ಖರೀದಿಸಿ ತೆಗೆದುಕೊಂಡು ಹೋದರು.

ಲಕ್ಸಂಬರ್ಗ್ ನಗರದಲ್ಲಿ ಒಂದು ಎಕ್ಸಿಬಿಷನ್‌ನಲ್ಲಿ ನಮ್ಮ ಬುಕ್ ಸ್ಟಾಲ್‌ಗೆ ಅಲ್ಲಿನ ಮೇಯರ್ ಸಹ ಬಂದಿದ್ದರು. ಅವರಿಗೆ ಅಲ್ಲಿನ ನಮ್ಮ ಜಮಾಅತಿನ ಅಧ್ಯಕ್ಷರು ಜಮಾಅತ್ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸಿದರು. ಅವರಿಗೆ ಒಂದು ಪುಸ್ತಕ ಪಾರಿತೋಷಿಕವಾಗಿ ನೀಡಲಾಯಿತು. ಆಗ ಮೇಯರ್ ಹೇಳಿದರು– ನಿಮ್ಮ ಜಮಾಅತ್ ಬಹಳ ಒಳ್ಳೆಯ ಕೆಲಸ ಮಾಡುತ್ತಿದೆ. ನೀವು ಇಸ್ಲಾಮ್ ಧರ್ಮದ ಈ ಸುಂದರ ಚಿತ್ರವನ್ನು ಶೀಘ್ರವಾಗಿ ಲೋಕದಲ್ಲಿ ಹರಡಬೇಕು ಎಂದು

ಹೇಳಿದರು. ಹೃದಯದಲ್ಲಿ ನೋವು ಅನುಭವಿಸಿದ ಒಬ್ಬ ನವ ಮುಸ್ಲಿಮ್ ಬಗ್ಗೆ ಹೇಳುತ್ತೇನೆ: ಹಾಲೆಂಡ್ ದೇಶದ ಅಮೀರ್ ಸಾಹೇಬರು ಬರೆಯುತ್ತಾರೆ– ಹಾಲೆಂಡ್ ದೇಶದ ಒಬ್ಬ ಡಚ್ ವಂಶಜ ಮುಸ್ಲಿಮ್ ಬಿಲಾಲ್ ಎಂಬವರು ಮುಸ್ಲಿಮರ ಇಂದಿನ ದುರವಸ್ಥೆಯನ್ನು ಕಂಡು ಬಹಳ ನೋವು ಅನುಭವಿಸಿದರು. ಅವರು ಹೇಳುತ್ತಾರೆ: ನಾನು ಅಹ್ಮದಿಯಾ ಜಮಾಅತಿನ ಉಪದೇಶಗಳಿಂದ ಬಹಳ ಪ್ರಭಾವಿತನಾಗಿದ್ದೇನೆ. ಅಲ್ಲಾಹನು ನನಗೆ ಅಹ್ಮದಿಯತ್ತಿನ ಸತ್ಯವನ್ನು ಪ್ರಕಟಿಸಿದನು. ಬೈಅತ್ ಮಾಡುವ ಭಾಗ್ಯ ನನಗೆ ನೀಡಿದನು. ನಾನು ಜಮಾಅತಿನ ಕಾರ್ಯಕ್ರಮಗಳಲ್ಲಿ ಭಾಗವಹಿಸುವೆನು. ಈಗ ನಾನು ಆಧ್ಯಾತ್ಮಿಕ ಅಭಿವೃದ್ಧಿಗಳಿಸಿದ್ದೇನೆ. ನನಗಿದ್ದ ಬೇಸರ ಈಗ ನಿವಾರಣೆಯಾಗಿದೆ ಎಂದು ವಿವರಿಸಿದರು.

ಪವಿತ್ರ ಖುರ್‌ಆನಿನ ಉಪದೇಶಗಳು ಅನ್ಯರ ಮೇಲೆ ಯಾವ ರೀತಿ ಪ್ರಭಾವ ಬೀರುತ್ತದೆ ಎಂಬುದರ ಬಗ್ಗೆ ಒಂದು ಉದಾಹರಣೆ ಹೇಳುತ್ತೇನೆ. ಕೆನಡದ ಒಬ್ಬ ಅಹ್ಮದಿ ಹೀಗೆ ಬರೆಯುತ್ತಾರೆ– ನಮ್ಮ ಬುಕ್ ಸ್ಟಾಲ್‌ಗೆ ಒಂದು ಇಂಗ್ಲಿಷ್ ದಂಪತಿ ಆಗಮಿಸಿದರು. ಪತ್ನಿ ತೀವ್ರ ಕ್ರೈಸ್ತಳಾಗಿದ್ದರು. ಪವಿತ್ರ ಖುರ್‌ಆನ್ ಖರೀದಿಸಬೇಡಿರಿ ಎಂದು ಪತಿಗೆ ಹೇಳುತ್ತಾ ಇದ್ದರು. ಆಗ ಆ ವ್ಯಕ್ತಿ ನಮ್ಮೊಡನೆ ಹೇಳಿದರು: "ನೀವು ಪವಿತ್ರ ಖುರ್‌ಆನಿನ ಯಾವುದಾದರೂ ಒಂದು ವಿಷಯ ನಮಗೆ ವಿವರಿಸಿಕೊಟ್ಟು ನಾವು ಪವಿತ್ರ ಖುರ್‌ಆನನ್ನು ಖರೀದಿಸುವಂತೆ ಪ್ರೇರೇಪಿಸಿರಿ." ಆಗ ಪವಿತ್ರ ಖುರ್‌ಆನ್‌ನಲ್ಲಿ ಹಝ್ರತ್ ಈಸಾ ಅಲೈಹಿಸ್ಸಲಾಮರ ಬಗ್ಗೆ ಪ್ರಸ್ತಾಪಿಸಲಾದ ಭಾಗವನ್ನು ಅವರಿಗೆ ತೋರಿಸಿಕೊಡಲಾಯಿತು. ಆಗ ಆ ಭಾಷಾಂತರವನ್ನು ಪತ್ನಿ ಸಹ ಓದಲು ತೊಡಗಿದರು. ಸ್ವಲ್ಪ ಹೊತ್ತು ಓದಿದ ಅನಂತರ ಅವರು ಹೇಳಿದರು– ಇದು ನಿಜವಾಗಿಯೂ ಆಸಕ್ತಿದಾಯಕ ಗ್ರಂಥವಾಗಿದೆ. ನಾವು ಪತ್ರಿಕೆಗಳಲ್ಲಿ ಓದಿದ್ದು, ಸಂಪರ್ಕ ಮಾಧ್ಯಮಗಳು ನಮಗೆ ತಿಳಿಸಿದ್ದು ಪವಿತ್ರ ಖುರ್‌ಆನ್ ಅನ್ಯರ ಬಗ್ಗೆ ದ್ವೇಷಭರಿತವಾಗಿದೆ ಎಂದು. ಆದರೆ ಈ ಗ್ರಂಥದಲ್ಲಿ ಹಝ್ರತ್ ಈಸಾ ಮತ್ತು ಅವರ ಮಾತೆಯನ್ನು ಬಹಳ ಪ್ರೀತಿಯಿಂದ ವರ್ಣಿಸಲಾಗಿದೆ ಎಂದು ಹೇಳಿದರು. ಹಾಗೆ ಅವರು ಪವಿತ್ರ ಖುರ್‌ಆನ್ ಖರೀದಿಸಿದರು. ಮತ್ತೆ ಕೆಲವು ವಾರಗಳ ನಂತರ ಅವರು ಪುನಃ ಬುಕ್ ಸ್ಟಾಲ್‌ಗೆ ಬಂದಾಗ ನಮಗೆ ಕೃತಜ್ಞತೆ ಅರ್ಪಿಸಿ ಹೇಳಿದರು– ನಾವು ಪವಿತ್ರ ಖುರ್‌ಆನ್ ಓದಿದೆವು. ಸಂಪರ್ಕ ಮಾಧ್ಯಮಗಳಲ್ಲಿ ಇಸ್ಲಾಮ್ ಬಗ್ಗೆ ಮತ್ತು ಪೈಗಂಬರರ ಬಗ್ಗೆ ದ್ವೇಷ ಹಬ್ಬಿಸಲಾಗುತ್ತಿದೆ. ಒಬ್ಬನು ಪವಿತ್ರ ಖುರ್‌ಆನ್ ಓದಿದರೆ ಅಥವಾ ಒಮ್ಮೆ ಕಣ್ಣು ಹಾಯಿಸಿ ನೋಡಿದರೆ ಸಹ ಎಲ್ಲ ತಪ್ಪು ಗ್ರಹಿಕೆಗಳು ನಿವಾರಣೆ ಆಗುವುದರಲ್ಲಿ ಸಂಶಯವಿಲ್ಲ ಎಂದು ಹೇಳಿದರು.

ಬೆನಿನ್ ದೇಶದಲ್ಲಿ ನಮ್ಮ ಒಂದು ಬುಕ್ ಸ್ಟಾಲಿಗೆ ಅಲ್ಲಿನ ಸರಕಾರಿ ಶಾಲೆಯ ಅಧ್ಯಾಪಕರೊಬ್ಬರು ಬಂದರು. ಅಹ್ಮದಿಯಾ ಜಮಾಅತಿನ ಪ್ರೀತಿ ಮತ್ತು ಶಾಂತಿಯ ಉಪದೇಶಗಳನ್ನು ಓದಿದಾಗ ಹೇಳಿದರು: ನನ್ನ ವಿದ್ಯಾರ್ಥಿಗಳಿಗೆ ಕೊಡಲು ಸಹ ಸಾಹಿತ್ಯ ನೀಡಿರಿ. ಅವರು ಸಹ ನಿಮ್ಮ ಪುಸ್ತಕಗಳನ್ನು ಓದಬೇಕೆಂದು ಹಾಗೂ ಸಮಾಜ ಶಾಂತಿ ಮತ್ತು ಪ್ರೀತಿಯಿಂದ ತುಂಬಬೇಕೆಂದು ನಾನು ಬಯಸುತ್ತೇನೆ ಎಂದು ಹೇಳಿದರು. ಒಳ್ಳೆಯ ಪ್ರಕೃತಿ ಹೊಂದಿದ ಅಹ್ಮದಿಯೇತರ ಮುಸ್ಲಿಮರು ಸಹ ಅಹ್ಮದಿಯಾ ಜಮಾಅತಿನ ಇಸ್ಲಾಮೀ ವ್ಯವಸ್ಥೆಯನ್ನು ನೋಡಿ ಪ್ರಭಾವಿತರಾಗುತ್ತಾರೆ. ಅದು ಅವರಿಗೆ ಮಾರ್ಗದರ್ಶಕವಾಗುತ್ತದೆ. ಬುರ್ಕಿನೋ ಫಾಸೋ ದೇಶದ ಮುಬಲ್ಲಿಗ್ ಹೀಗೆ ಹೇಳುತ್ತಾರೆ: ಸಲಾಗೋಗೋ ಎಂಬ ಸ್ಥಳದಲ್ಲಿ ತಬ್ಲೀಗ್‌ಗೋಸ್ಕರ ಹೋದಾಗ ಅಲ್ಲಿ ಪುರುಷರೂ ಮಹಿಳೆಯರೂ ಭಾಷಣ ಆಲಿಸಲು ಬಂದರು. ಅಲ್ಲಿಗೆ ಝುಕರಿಯಾ ಎಂಬ ಹೆಸರಿನ ಓರ್ವ ವ್ಯಕ್ತಿ ಬಂದು ಹೇಳಿದರು: ನಾನು ಸ್ವಲ್ಪ ಸಮಯದ ಹಿಂದೆ ಒಂದು ಸ್ವಪ್ನ ಕಂಡಿದ್ದೆ. ಆ ಸ್ವಪ್ನದಲ್ಲಿ ನಾನು ಚಂದವಾಗಿ ಹಣ ನೀಡುತ್ತಿದ್ದುದಾಗಿ ಕಂಡೆನು. ಆಗ ಒಂದು ಧ್ವನಿ ಕೇಳಿಸಿತು– ಚಂದಾ ದೇಣಿಗೆ ಎಂತಹ ಮುಸ್ಲಿಮ್ ಸಂಘಟನೆಗೆ ಕೊಡಬೇಕೆಂದರೆ ಅವರಿಗೆ ಒಂದು ಬೈತುಲ್ ಮಾಲ್ ಇರಬೇಕು. ನಾನು ಅನಂತರ ಇಂತಹ ಇಸ್ಲಾಮೀ ಸಂಘಟನೆಯನ್ನು ಹುಡುಕುತ್ತಿದ್ದೆ. ಅಹ್ಮದಿಯಾ ಜಮಾಅತಿನ ಮುರಬ್ಬಿ ಸಾಹೇಬರು ಈ ಜಮಾಅತಿನ ಹಣಕಾಸಿನ ವ್ಯವಸ್ಥೆ ಬಗ್ಗೆ ವಿವರಿಸಿದಾಗ ನನಗೆ ನನ್ನ ಸ್ವಪ್ನದಲ್ಲಿ ಕೇಳಿಸಿದ ಶಬ್ದಗಳ ವ್ಯಾಖ್ಯಾನ ತಿಳಿಯಿತು ಎಂದು ಹೇಳಿ ಆಗಲೇ ಆ ವ್ಯಕ್ತಿ ಹತ್ತು ಸಾವಿರ ಫ್ರಾಂಕ್‌ಸೈಫ ಚಂದಾ ದೇಣಿಗೆ ನೀಡಿದರು. ಜನರಿಗೆ ಝುಕರಿಯಾ ಸಾಹೇಬರ ಸ್ವಪ್ನದ ಬಗ್ಗೆ ತಿಳಿದಾಗ ಮತ್ತು ಚಂದಾ ದೇಣಿಗೆಗೆ ರಸೀದಿ ಕೊಡುವುದನ್ನು ಕಂಡಾಗ ಅವರೆಲ್ಲರೂ ಬಹಳ ಪ್ರಭಾವಿತರಾದರು. ಅಲ್ಲಾಹನ ಅನುಗ್ರಹದಿಂದ ಅನಂತರ ಆ ಗ್ರಾಮದ 282 ಜನರು ಬೈಅತ್ ಮಾಡಿದರು. ಅವರೆಲ್ಲರೂ ಅಹ್ಮದಿಯಾ ಜಮಾಅತಿನ ಆರ್ಥಿಕ ವ್ಯವಸ್ಥೆ ಪ್ರಕಾರ ಚಂದಾ ದೇಣಿಗೆ ನೀಡಲು ತೊಡಗಿದ್ದಾರೆ.

ಗ್ವಾಟೇಮಾಲಾ ದೇಶದಲ್ಲಿ ನಮ್ಮ ಪ್ರಚಾರ ಕರಪತ್ರಗಳನ್ನು ಹಂಚುವಾಗ ಯೂಸುಫ್ ಎಂಬ ಒಬ್ಬ ಯುವಕನ ಪರಿಚಯವಾಯಿತು. ನಂತರ ಅವರು ನಮ್ಮ ಮಿಶನ್ ಹೌಸಿಗೆ ಬಂದು ಬೈಅತ್ ಮಾಡಿದರು. ಅವರು ಅದಕ್ಕಿಂತ ಸ್ವಲ್ಪ ಸಮಯದ ಮೊದಲು ಇಸ್ಲಾಮ್ ಧರ್ಮ ಸ್ವೀಕರಿಸಿದವರಾಗಿದ್ದರು. ಅವರು ಹೀಗೆ ಹೇಳಿದರು: ಇತರ ಮಸ್‌ಜಿದ್‌ಗೆ ಹೋದಾಗ ನನಗೆ ಮಾನಸಿಕ ಶಾಂತಿ ದೊರಕಲಿಲ್ಲ. ಜನರು ಪರಸ್ಪರ ದ್ವೇಷಾಸೂಯೆ ಹೊಂದಿರುವುದಾಗಿ ಕಂಡೆನು. ಒಂದು ದಿನ ನಾನು ಬಹಳವಾಗಿ ಪ್ರಾರ್ಥಿಸಿದ ನಂತರ ನಿದ್ರಿಸಿದಾಗ ಒಂದು ಸ್ವಪ್ನ ಕಂಡೆನು. ಅತ್ಯಂತ ಆಧ್ಯಾತ್ಮಿಕ ರೂಪ ಹೊಂದಿದ ಒಬ್ಬ ಹಿರಿಯರನ್ನು ನಾನು ಸ್ವಪ್ನದಲ್ಲಿ ಕಂಡೆನು. ಒಂದು ಮಾರ್ಗ ಕಾಣಿಸಿತು ಅದರ ಮೇಲೆಲ್ಲಾ ಬೂದಿ ತುಂಬಿತ್ತು. ಈ ಹಿರಿಯರು ಮುಂದೆ ನಡೆದು ತನ್ನನ್ನು ಹಿಂಬಾಲಿಸಲು ನನ್ನೊಂದಿಗೆ ಸಂಜ್ಞೆ ಮೂಲಕ ಹೇಳಿದರು. ಆ ಹಿರಿಯರು ನಡೆಯಲು ತೊಡಗಿದಾಗ ಬೂದಿ ತುಂಬಿದ ಮಾರ್ಗ ಸ್ವಚ್ಛವಾಗಲು ತೊಡಗಿತು. ಆ ಯುವಕನಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಚಿತ್ರವನ್ನು ತೋರಿಸಿದಾಗ, ನಾನು ಸ್ವಪ್ನದಲ್ಲಿ ಕಂಡ ಹಿರಿಯರು ಇವರೇ ಆಗಿದ್ದಾರೆ ಎಂದು ಆ ಯುವಕ ಹೇಳಿದರು. ಅಲ್ಲಾಹನ ಅನುಗ್ರಹದಿಂದ ಆ ಯುವಕನ ವಿಶ್ವಾಸ ಈ ಕಾರಣದಿಂದ ಇನ್ನಷ್ಟು ದೃಢವಾಯಿತು.

ಫ್ರಾನ್ಸಿನ ಅಮೀರ್ ಸಾಹೇಬರು ಬರೆಯುತ್ತಾರೆ: ಹೊಸದಾಗಿ ಬೈಅತ್ ಮಾಡಿದ ಕಮಾಲ್ ಸಾಹೇಬ್ ಎಂಬ ವ್ಯಕ್ತಿ ಹೀಗೆ ಹೇಳಿದರು: 'ನಾನು ಅನೇಕ ವರ್ಷಗಳಿಂದ ಸಾಂಪ್ರದಾಯಿಕ ಮುಸ್ಲಿಮನಾಗಿದ್ದೆ. ಮೌಲವಿಗಳು ಪವಿತ್ರ

ಖುರ್‌ಆನ್‌ಗೆ ನೀಡುತ್ತಿದ್ದ ವ್ಯಾಖ್ಯಾನದಿಂದ ನನಗೆ ಸಮಾಧಾನ ಸಿಗುತ್ತಿರಲಿಲ್ಲ. ನನ್ನ ಭಾವನವರು ನನ್ನೊಂದಿಗೆ ಅಹ್ಮದಿಯಾ ಜಮಾಅತಿನ ಬಗ್ಗೆ ತಿಳಿಸಿದರು. ಹಝ್ರತ್ ಖಲೀಫತುಲ್ ಮಸೀಹ್ ಸಾನಿ ರಝಿಯಲ್ಲಾಹು ಅನ್‌ಹುರವರ ತಫ್‌ಸೀರ್ ಓದಲು ಹೇಳಿದರು. ನಾನು ತಫ್‌ಸೀರ್ ಓದಿದಾಗ ಆಶ್ಚರ್ಯಚಕಿತನಾದೆ. ಇಷ್ಟು ಸ್ಪಷ್ಟವೂ ಸರಳವೂ ಆಗಿರುವ ತಫ್‌ಸೀರ್ ಕಳೆದ ಹದಿನಾಲ್ಕು ನೂರು ವರ್ಷಗಳಲ್ಲಿ ಯಾರೂ ಏಕೆ ಬರೆಯಲಾಗಲಿಲ್ಲ ಎಂದು ನನಗೆ ಆಶ್ಚರ್ಯವಾಯಿತು. ಅನಂತರ ನಾನು ಎಂ.ಟಿ.ಎ. ನಲ್ಲಿ ಅನೇಕ ಕಾರ್ಯಕ್ರಮಗಳನ್ನು ವೀಕ್ಷಿಸಿದೆ. ಮತ್ತು ಇಂಟರ್‌ನೆಟ್‌ನಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಅನೇಕ ಗ್ರಂಥಗಳನ್ನು ಓದಿದೆ. ನನಗೆ ಒಂದು ನಿಧಿ ನಿಕ್ಷೇಪ ದೊರೆತಂತಾಯಿತು. ನನ್ನ ಆತ್ಮಕ್ಕೆ ಸಾಂತ್ವನ ಲಭಿಸಿತು. ನನ್ನ ಎಲ್ಲ ಸಂಶಯಗಳು ದೂರ ಸರಿದವು. ನೈಜ ಇಸ್ಲಾಮನ್ನು ಗುರುತಿಸಿ ನಾನು ಬೈಅತ್ ಮಾಡಿದೆ' ಎಂದು ಹೇಳಿದರು.

ಲೋಕದ ವಿವಿಧ ಭಾಗಗಳಲ್ಲಿ ಅಹ್ಮದಿಯಾ ಜಮಾಅತ್ ಮೂಲಕ ಇಸ್ಲಾಮ್ ಧರ್ಮದ ಶಾಂತಿ ಮತ್ತು ಪ್ರೇಮದ ಸಂದೇಶ ತಲಪುವಾಗ ಒಳ್ಳೆಯ ಪ್ರಕೃತಿ ಹೊಂದಿದ ಜನರು ಈ ಸಂದೇಶವನ್ನು ಅಂಗೀಕರಿಸುತ್ತಾರೆ. ಗ್ವಾಟೇಮಾಲಾದ ಇನ್‌ಚಾರ್ಜ್ ಮುಬಲ್ಲಿಗ್ ಹೀಗೆ ಬರೆದಿದ್ದಾರೆ: ನಾವು ಕರಪತ್ರಗಳನ್ನು ಹಂಚಿದಾಗ ಅದರ ಫಲವಾಗಿ 91 ಜನರು ಅಹ್ಮದಿಯಾ ಜಮಾಅತಿಗೆ ಸೇರಿದರು. ಅವರಲ್ಲಿ ಒಬ್ಬ ಪಾದರಿ ಸಹ ಇದ್ದಾರೆ. ಅವರು 33 ವರ್ಷಗಳ ಕಾಲ ಕ್ಯಾಥೋಲಿಕ್ ಚರ್ಚ್ ಪಾದರಿಯಾಗಿದ್ದರು. ಐದು ವರ್ಷ ಕಾಲ ಪ್ರೊಟೆಸ್ಟೆಂಟ್ ಚರ್ಚ್‌ನೊಂದಿಗೆ ಸಂಬಂಧ ಹೊಂದಿದ್ದರು. ಅದೇ ರೀತಿ ಇನ್ನೊಬ್ಬರು ಒಂದು ಪಟ್ಟಣದಲ್ಲಿ ನ್ಯಾಯಾಧೀಶರಾಗಿದ್ದಾರೆ. ಡೂಮರಿಗೋ ಎಂಬ ಹೆಸರಿನ ಅವರು ಅಹ್ಮದಿಯತ್ ಸ್ವೀಕರಿಸಿದರು. ನಂತರ ಅವರು ಒಂದು ತಬ್ಲೀಗ್ ಸಭೆ ನಡೆಸಿದರು. ಅದರಲ್ಲಿ ಇಸ್ಲಾಮ್ ಬಗ್ಗೆ ವಿಸ್ತಾರವಾಗಿ ವಿವರಿಸಿದ ನಂತರ ಪ್ರಶ್ನೋತ್ತರ ಕಾರ್ಯಕ್ರಮ ಸಹ ನಡೆಸಲಾಗಿತ್ತು. ಈ ಸಭೆ ಏಳು ಗಂಟೆಗಳ ಕಾಲ ಮುಂದುವರಿಯಿತು. ಕೊನೆಗೆ 89 ಜನರು ಪುರುಷರು ಮತ್ತು ಮಹಿಳೆಯರು ಇಸ್ಲಾಮ್ ಧರ್ಮಕ್ಕೆ ಸೇರುವುದಾಗಿ ಪ್ರಕಟಿಸಿದರು.

ಒಟ್ಟಿನಲ್ಲಿ ಇದು ಅಲ್ಲಾಹನು ನೆಟ್ಟ ಇಸ್ಲಾಮಿನ ಗಿಡವಾಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಭವಿಷ್ಯವಾಣಿ ಪ್ರಕಾರ ಈ ಗಿಡಕ್ಕೆ ನೀರು ಹಾಕಲು ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನೇಮಿಸಿದನು. ಪುನರುತ್ಥಾನದ ತನಕ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಂದ ಅನುಗ್ರಹ ಪಡೆಯುವ ಈ ಗಿಡಕ್ಕೆ ಅಲ್ಲಾಹನು ನೀರನ್ನು ಒದಗಿಸುತ್ತಲೂ ಇರುವನು. ಇನ್‌ಶಾಅಲ್ಲಾಹ್ ಈ ಗಿಡ ಯಾವಾಗಲೂ ಹಚ್ಚ ಹಸುರಾಗಿ ಬೆಳೆಯುವುದು.

ಲೋಕವನ್ನು ಅಲ್ಲಾಹನ ಸಂಪ್ರೀತಿಗೊಳಪಡಿಸಿ ಚಲಾಯಿಸಲು ಹಾಗೂ ಶಾಂತಿ ಮತ್ತು ಪ್ರೇಮವನ್ನು ಹರಡಲು ಮೇಲೆ ವಿವರಿಸಿದ ಕೆಲವು ಘಟನೆಗಳನ್ನು ನಾನು ವಿವರಿಸಿರುವೆನು. ಸಾವಿರಾರು ಘಟನೆಗಳು ನಮ್ಮ ವಿಶ್ವಾಸವನ್ನು ವರ್ಧಿಸುವ ರೀತಿಯಲ್ಲಿ ವರದಿಯಾಗುತ್ತಿವೆ. ಅಲ್ಲಾಹನು ಯಾವ ರೀತಿ ಹೃದಯಗಳನ್ನು ತೆರೆಯುತ್ತಿದ್ದಾನೆ. ಯಾವ ರೀತಿ ಅನ್ಯರಿಂದ ನಮ್ಮ ಪರವಾಗಿ ಮಾತನಾಡುವಂತೆ ಮಾಡುತ್ತಾನೆ. ಆಫ್ರಿಕದ ನಿವಾಸಿಯಾಗಲಿ, ಅರಬ್ ದೇಶದವ, ಯುರೋಪಿನವ, ದಕ್ಷಿಣ ಆಫ್ರಿಕದವ ಇವರೆಲ್ಲರ ಮೇಲೆ ಸಮಾನ ಪ್ರಭಾವ ಉಂಟಾಗುತ್ತಿದೆ. ಏಕೆಂದರೆ ಜಾಗತಿಕ ಅಂಗೀಕಾರಾರ್ಹ ತತ್ವಗಳು ಇಸ್ಲಾಮ್ ಧರ್ಮದ್ದು ಮಾತ್ರವಾಗಿವೆ. ಒಬ್ಬನು ತಕ್ಷಣ ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದರೂ ಸ್ವೀರಿಸದಿದ್ದರೂ ಅವನು "ಇಸ್ಲಾಮ್ ಮಾತ್ರ ಲೋಕ ಶಾಂತಿಗೆ ಖಾತರಿ ನೀಡುತ್ತದೆ" ಎಂದು ಹೇಳಲು ನಿರ್ಬಂಧಿತನಾಗುತ್ತಾನೆ. ಸ್ವಾರ್ಥಭರಿತ ಮುಸ್ಲಿಮ್ ನಾಯಕರ ಅಥವಾ ಸ್ವಾರ್ಥ ಹಿತಾಸಕ್ತಿ ಹೊಂದಿದ ಗುಂಪುಗಳ ಕೃತ್ಯಗಳನ್ನು ಇಸ್ಲಾಮ್ ಧರ್ಮದ ತತ್ವಗಳ ಭಾಗವೆಂದು ನ್ಯಾಯ ನಿಷ್ಠರಾದವರು ಅಂಗೀಕರಿಸಲಾರರು. ಯಾರು ನ್ಯಾಯ ನಿಷ್ಠನಾಗಿಲ್ಲವೋ ಅವನು ಮಾತ್ರ ಹಾಗೆ ಆಕ್ಷೇಪಿಸುವನು. ಇಸ್ಲಾಮ್ ವಿರುದ್ಧ ಶಕ್ತಿಗಳು ಇಸ್ಲಾಮ್ ವಿರುದ್ಧವಾಗಿ ಎಷ್ಟು ಪ್ರಚಾರ ನಡೆಸಿದರೂ ಇಸ್ಲಾಮ್ ಮಾತ್ರವೇ ಲೋಕಕ್ಕೆ ಅಲ್ಲಾಹನ ಸಾಮೀಪ್ಯಗಳಿಸುವ ಮಾರ್ಗ ತೋರಿಸುವಂತಹ ದಾಗಿದೆ. ಹಾಗೂ ಶಾಂತಿ ಮತ್ತು ಸುರಕ್ಷೆ ನೀಡುವುದಾಗಿದೆ. ಇಂದಲ್ಲವಾದರೆ ನಾಳೆ ಲೋಕವು ಅಂಗೀಕರಿಸಿ ಹೇಳುವುದು– ಇಸ್ಲಾಮ್ ಧರ್ಮ ಮಾತ್ರವೇ ಲೋಕದ ಶಾಂತಿ ಮತ್ತು ಸುರಕ್ಷೆಗೆ ಖಾತರಿ ನೀಡುವುದೆಂದು– ಇನ್‌ಶಾಅಲ್ಲಾಹ್.

ನಾವು ಸಹ ಆ ವಿಜಯದಲ್ಲಿ ಪಾಲುಗಾರರಾಗಲು, ಅಲ್ಲಾಹನ ಅನುಗ್ರಹಗಳನ್ನು ಹಲವು ಪಟ್ಟು ಹೆಚ್ಚಾಗಿ ಕಾಣಲು, ನಮ್ಮ ಕರ್ಮಗಳನ್ನು ಇಸ್ಲಾಮ್ ಧರ್ಮದ ಪ್ರಕಾರ ನಡೆಸಲು ಅಲ್ಲಾಹನು ನಮಗೆ ಭಾಗ್ಯ ದಯಪಾಲಿಸಲಿ – ಆಮೀನ್.

——————————*****——————————


***Friday Sermon delivered by Hadrath Khaleefatul Masih Al Khamis*** *(atba)*

*at Masjid Baithul Futhuh, London on 11-09-2015.*

**Summarized by** *Majlis Ansarullah Bharat*

***Kannada Translation**:* M. Ubeidullah for Kannada Desk, Qadian

***Reviewed by**:* M.P Ibrahim | ***Typing**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**:* *khutuba.kannada@gmail.com*

**You can find all the Sermons archived at**: www.alislam.org/friday-sermon